ಚೆಲುವಿನ ಮೊತ್ತದಂತಿದ್ದವಳು ನನ್ನಂತಹ ಸಾಧಾರಣನನ್ನು ವರಿಸಿದ್ದು, ಒಲಿದಿದ್ದು ಎಲ್ಲವೂ ನನಗೆ ವಿಸ್ಮಯವೆ. ಅವಳ ಕೆಳಮಧ್ಯಮ ವರ್ಗದ ಕುಟುಂಬಕ್ಕೆ ನನ್ನ ಸರ್ಕಾರಿ ಕಚೇರಿಯಲ್ಲಿನ ಗುಮಾಸ್ತಿಕೆಯೂ ಬಹಳ ಪ್ರಾಸ್ಪೆಕ್ಟಿವ್ ಆಗಿ ತೋರಿದ್ದೊಂದು ವರದಾನವಾಗಿತ್ತು. ನೋಡಿದೆ, ಒಪ್ಪಿದೆ... ಅವರೂ ಒಪ್ಪಿದರು. ಮದುವೆಯಾಯ್ತು ಎನ್ನುವಷ್ಟು ಸರಳವಾಗಿ ಎಲ್ಲವೂ ನಡೆದಿತ್ತು. ಒಪ್ಪಿಗೆ ತಿಳಿಸಿದ ಮೇಲೆ ನಾನೊಮ್ಮೆ ಅವಳೊಡನೆ ಮಾತಾಡಲು ಹೋದೆ. ಅವಳೊಡನೆಯ ಏಕಾಂತದಲ್ಲಿ 'ನೋಡು ರಮ್ಯ, ನೀನು ಈ ಕಾಲದ ಹುಡುಗಿ. ನಿನಗಿಂತ ನಾನು ಎಂಟು ವರ್ಷ ದೊಡ್ಡವನು. ನನಗೆ ತುಂಬಾ ಸಂಪಾದನೆಯಿಲ್ಲ. ಚಿಕ್ಕ ಕೆಲಸ, ಚಿಕ್ಕ ಸಂಬಳ, ಇರಲೊಂದು ಸೂರಿದೆ. ಅಪ್ಪ ಕಟ್ಟಿದ್ದು. ನನ್ನಕ್ಕ ಯಾವತ್ತಿಗೂ ಪಾಲು ಕೇಳುವವಳಲ್ಲ. ತಾಯಿಯನ್ನು ನೋಡಿಕೊಳ್ಳುವ ಜವಾಬ್ದಾರಿಯೂ ನನಗಿದೆ. ಸಂಸಾರ ತೂಗಿಸಲು ತಾಪತ್ರಯವಿಲ್ಲದಿದ್ದರೂ ತುಂಬ ಹೆಬ್ಬುಬ್ಬು ಹೇಳಿಕೊಳ್ಳುವಂತಿರುವುದಿಲ್ಲ ನಮ್ಮ ಬದುಕು. ನೀನು ಇದನ್ನೆಲ್ಲ ತಿಳಿದೇ ಒಪ್ಪಿಕೊಂಡರೆ ತುಂಬಾ ಸಂತೋಷ. ಇಲ್ಲದಿದ್ದರೆ ಪರವಾಗಿಲ್ಲ, ಯೋಚನೆ ಮಾಡು' ಅಂದೆ. ಒಂದು ನಿಮಿಷ ಮೌನವಾಗಿದ್ದವಳು ತಟ್ಟನೆ ಬಾಯಿತೆರೆದು, 'ನಿಮಗೆಷ್ಟು ಸಂಬಳ ಅಂತ ನಂಗೆ ಗೊತ್ತಿದೆ. ನಂಗೇನೂ ತೊಂದರೆಯಿಲ್ಲ. ಆದ್ರೆ ನಂದೊಂದು ರಿಕ್ವೆಸ್ಟು... ಮದ್ವೆಯಾದ್ಮೇಲೆ ಮನೇಲೆ ಇರು ಅನ್ನಬಾರದು. ನನ್ನ ಯೋಗ್ಯತೆಗೆ ಯಾವ ಕೆಲಸ ಸಿಕ್ಕುತ್ತೋ ಅದನ್ನು ಮಾಡುತ್ತೀನಿ. ನಂಗೂ ನನ್ನ ಸಂಸಾರ ಹಾಗಿರಬೇಕು, ಹೀಗಿರಬೇಕು ಅಂತ ಕನಸಿರುತ್ತಲ್ಲ' ಅಂದಳು. 'ನಿಂದು ಬಿ.ಎ ಕಂಪ್ಲೀಟ್ ಆಗಿದೆಯ?' ಅಂದೆ. ಮುಖ ಕೆಳಹಾಕಿ 'ಇಲ್ಲ, ಎರಡು ಸಬ್ಜೆಕ್ಟ್ ಉಳಿಸಿಕೊಂಡಿದ್ದೀನಿ' ಅಂದಳು. ನಾನಾವಾಗ 'ಸರಿ, ಮದುವೆಯಾದ ಮೇಲೆ ಮುಗಿಸಿಕೋ. ಆಮೇಲೆ ಬಿ.ಎಡ್‌ಗೆ ಸೇರಿಸ್ತೀನಿ, ನಿಂಗಿಷ್ಟ ಇದ್ರೆ' ಅಂದೆ. ಅದಕ್ಕವಳು ಅನುಮಾನದಿಂದ 'ಊಂ ನೋಡಣ... ನಂಗೆ ಟೀಚರಾಗೋಕೆ ಇಷ್ಟವಿಲ್ಲ. ನಂಗಷ್ಟು ಬುದ್ಧೀನೂ ಇಲ್ಲ. ನಂಗೆ ಯಾವ ಕೆಲಸ ಸುಲಭ ಅನ್ನಿಸುತ್ತೋ, ಸಂತೋಷ ಕೊಡುತ್ತೋ ಅದನ್ನು ಮಾಡ್ತೀನಿ' ಅಂದಾಗ ತುಟಿಬಿರಿದು ನಗೆಯನ್ನು ಹತ್ತಿಕ್ಕದೆ, 'ಸರಿ ಹಾಗೇ ಮಾಡು' ಅಂದಿದ್ದೆ.

ಆಗ ಆ ಮಾತಿನ ಅರ್ಥವೇನೆಂದು ಗೊತ್ತಿದ್ದರೆ...

ಅವಳಿಗೆ ಮಧ್ಯಮ ವರ್ಗದ ಜೀವನದ ಮೇಲೆ ಅದೆಷ್ಟು ಜಿಗುಪ್ಸೆಯಿತ್ತೆಂದು ಅವಳನ್ನು ವರಿಸಿದ ಕೆಲದಿನಗಳಲ್ಲೇ ನನಗೆ ಗೊತ್ತಾಗಿಬಿಟ್ಟಿತು. ಅವಳ ಅಭಿರುಚಿ–ಆಯ್ಕೆಗಳೆಲ್ಲವೂ ಶ್ರೀಮಂತ ವರ್ಗಕ್ಕೆ ಸೇರಿದಂತೆ ಇತ್ತು. ಅವಳು ಕೊಳ್ಳುವ ಕಾಸ್ಮೆಟಿಕ್ಸ್, ಬ್ರಾ–ಪ್ಯಾಂಟಿಗಳು ಕೂಡ ಒಳ್ಳೆಯ ಬ್ರಾಂಡುಗಳ ದುಬಾರಿ ವಸ್ತುಗಳಾಗಿದ್ದವು. ಆರಂಭದಲ್ಲಿ ನಾನದನ್ನು ತಲೆಗೆ ತೆಗೆದುಕೊಳ್ಳಲಿಲ್ಲ. ಖುಷಿಯಿಂದಲೇ ನಾನವಳಿಗೆ ಅವೆಲ್ಲವನ್ನು ಕೊಡಿಸುತ್ತಿದ್ದೆ. ಆದರೆ... ವರ್ಷವಾಗುವಷ್ಟರಲ್ಲಿ, ನಾನಿವಳ ಬಯಕೆಗಳನ್ನು ಈಡೇರಿಸುತ್ತಾ ಕೂತರೆ ಬದುಕಿನ ಅಗತ್ಯ ವಸ್ತುಗಳಿಗೆ ತತ್ವಾರವೆಂದು ಅರ್ಥವಾಗಿಬಿಟ್ಟಿತು. ನಯವಾಗಿ ಹೇಳಿದೆ. ಒಂದು ಸರಿಯಷ್ಟೆ. ಅರ್ಥಮಾಡಿಕೊಂಡುಬಿಟ್ಟಳು. ಮತ್ತೆಂದೂ ಅದು ಕೊಡಿಸು ಇದು ಕೊಡಿಸೆನ್ನಲಿಲ್ಲ. ಸುಧಾರಿಸಿದಳು ಅಂದುಕೊಂಡೆ. ಇದ್ದಕ್ಕಿದ್ದಂತೆ ಒಂದು ದಿನ ನನ್ನ ಆಫೀಸಿಗೆ ಫೋನ್ ಮಾಡಿ, 'ನಂಗೊಂದು ಕೆಲಸ ಸಿಗುವಂತಿದೆ. ಒಪ್ಕೋತೀರ ತಾನೆ? ನಾನಿವತ್ತು ತಿಳಿಸಬೇಕು' ಅಂದಳು. ನಾನು ಅಚ್ಚರಿಯಿಂದ, 'ಅರೆ ನಂಗೇನು ಹೇಳ್ಳೇ ಇಲ್ವಲ್ಲ ನೀನು... ಯಾವಾಗ ಅಪ್ಲೈ ಮಾಡಿದ್ದೆ? ಎಲ್ಲಿ ಕೆಲಸ?' ಅಂದಾಗ, 'ಅಪ್ಲೈ ಗಿಪ್ಲೈ ಏನೂ ಇಲ್ಲ. ನನ್ನ ಕ್ಲಾಸ್‌ಮೇಟೊಬ್ಬಳಿಗೆ ಹೇಳಿದ್ದೆ, ಯಾವುದಾದ್ರು ಕೆಲಸ ನೋಡು ಅಂತ. ಅವಳಿವತ್ತು ಇಂಟರ್ವ್ಯೂಗೆ ಬಾ, ನಂಗೆ ಗೊತ್ತಿರೋರೆ ಇದಾರೆ ಅಂದಳು. ಅನುರಾಗ್ ಟವರ್ಸ್‌ನಲ್ಲಿರೋ ಒಂದು ದೊಡ್ಡ ಹೋಟೆಲ್... ದೀಪರಾಗ ಅಂತ. ಅಲ್ಲಿ ಫ್ರಂಟಾಫೀಸ್‌ಗೆ... ರಿಸೆಪ್ಷನಿಸ್ಟ್ ಕೆಲಸ. ನಾನು ಆಯ್ಕೆ ಆಗಿದ್ದೀನಿ. ಹದಿನೈದು ಸಾವಿರ ಕೊಡ್ತಾರಂತೆ. ನಾಳೆಯಿಂದಾನೆ ಹೋಗಬೇಕು. ಬೆಳಗ್ಗೆ 8.30ರಿಂದ ಸಂಜೆ 5.30ರ ವರೆಗೆ. ರಾತ್ರಿ ಶಿಫ್ಟ್‌ಗೆ